ಸುಧಾರಣೆಗಾಗಿ ಬೇಕಾದಂಥ ಕ್ರಮಗಳನ್ನು ಜರುಗಿಸಲು ಇಚ್ಛಿಸಿದ್ದೇನೆ. ಮಾನ್ಯ ಹಿರಿಯ ಸದಸ್ಯರಾದ ಖರ್ಗೆಯವರು ಸಲಹೆಯನ್ನು ಕೊಟ್ಟಿದ್ದಾರೆ. ಡಿವಿಜನ್‌ಲೆವೆಲ್ ಡಿಪೋವನ್ನು ಮಾಡಿ ನೂಲು ಸರಬರಾಜು ಮಾಡಬೇಕೆಂದು ಹೇಳಿದ್ದಾರೆ. ಉತ್ತಮವಾದ ಅವರ ಸಲಹೆಯನ್ನು ನಾನು ಪರಿಶೀಲಿಸುತ್ತೇನೆ.

ಶ್ರೀ ಚಂದ್ರಶೇಖರ ಮಾಮನಿ (ಉಪಾಧ್ಯಕ್ಷರು):- ಮಾನ್ಯ ಅಧ್ಯಕ್ಷರೆ, ಸರಕಾರದವರು ವಿದ್ಯಾವಿಕಾಸ ಯೋಜನೆಯೊಳಗೆ ಮೊದಲು ನೂಲಿನ ಬಟ್ಟೆಗಳನ್ನು ಉಪಯೋಗ ಮಾಡತಕ್ಕಂಥ ವ್ಯವಸ್ಥೆ ಇತ್ತು. ಈಗ ಪಾಲಿಯೆಸ್ಟರ್ ಬಟ್ಟೆಯನ್ನು ಉಪಯೋಗ ಮಾಡಬೇಕೆಂಬ ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಹೀಗೆ ಮಾಡಿದರೆ ಕರ್ನಾಟಕದಲ್ಲಿನ ಜವಳಿಗಿರಣಿಗಳು ಏನು ನೂಲನ್ನು ಉತ್ಪಾದನೆ ಮಾಡುತ್ತಿದ್ದಾರೆ, ಅದು ಉಳಿದುಕೊಳ್ಳುವ ಸಂಭವವಿದೆ. ಮೊನ್ನೆಯ ದಿವಸ ಅಲ್ಲಿನ ವಿಷಯ ತಿಳಿದು ಬಂದಂತೆ ಪ್ರತಿ ತಿಂಗಳು ಒಂದರಿಂದ ಒಂದೂವರೆ ಲಕ್ಷ ಕೆ.ಜಿ. ನೂಲನ್ನು ಖರೀದಿ ಮಾಡುತ್ತಿದ್ದವರು ಕೇವಲ 20 ಸಾವಿರ ಕೆ.ಜಿ. ಮಾತ್ರ ಖರೀದಿ ಮಾಡುತ್ತಿದ್ದಾರೆ. ಹೀಗಾಗಿ ಮಿಲ್‌ಗಳಲ್ಲಿ ಸಾಕಷ್ಟು ದಾಸ್ತಾನು ಉಳಿದಿದೆ. ಆದುದರಿಂದ ಮೊದಲು ಯಾವರೀತಿಯಲ್ಲಿ ಹತ್ತಿ ಬಟ್ಟೆಯನ್ನು ಒದಗಿಸುತ್ತಿದ್ದರೋ ಹಾಗೆಯೇ ಮಾಡಬೇಕೆಂದು ಸೂಚಿಸ ಬಯಸುತ್ತೇನೆ. ಇದು ಹೊಸ ಪ್ರಶ್ನೆ ಅಲ್ಲ. ಅವರೂ ಕೂಡ ಸಹಕಾರಿ ಮಿಲ್ಲಿನ ಚೇರ್ಮನ್ ಆಗಿ ಕೆಲಸ ಮಾಡಿದ್ದಾರೆ. ನಾನೂ ಕೂಡ ಸಹಕಾರಿ ಮಿಲ್ಲಿನ ಚೇರ್ಮನ್ ಇದ್ದೇನೆ. ಈಗಾಗಲೇ ಒಂದು ಕೋಟಿ 40 ಲಕ್ಷ ರೂಪಾಯಿಗಳ ನೂಲು ನಮ್ಮ ಹತ್ತಿರ ದಾಸ್ತಾನು ಇದೆ.

ಅಧ್ಯಕ್ಷರು:- ಹಾಲಿ ಉಪಾಧ್ಯಕ್ಷರು, ಮಾಜಿ ಉಪಾಧ್ಯಕ್ಷರು ಎಲ್ಲರ ಹತ್ತಿರ ನೂಲು ಇದೆ, ನನಗೆ ಮಾತ್ರ ಅರಿವೆ ಇಲ್ಲ.

ಶ್ರೀ ಚಂದ್ರಶೇಖರ ಮಾಮನಿ (ಉಪಾಧ್ಯಕ್ಷರು):- ಸ್ಪಷ್ಟವಾಗಿ ಉತ್ತರ ಹೇಳಬೇಕು.

ಶ್ರೀ ಎಂ.ಎಸ್. ಪಾಟೀಲ್:- ತರಿಸಿಕೊಡುತ್ತೇನೆ.

ವಿಷಯ:- ಮೈಸೂರು ನಗರಕ್ಕೆ ಕುಡಿಯುವ ನೀರು ಯೋಜನೆ.

285 (1150) **ಶ್ರೀ ಎ. ರಾಮದಾಸ್ (ಕೃಷ್ಣರಾಜ):-** ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ಕುಡಿಯುವ ನೀರಿನ ಯೋಜನೆಯಲ್ಲಿ ಯಾದವಗಿರಿ ನಾಚನಹಳ್ಳಿ ಪಿ.ಎಸ್.ಸಿ. ಪೈಪ್ ಲೈನ್ ಕೆಲಸದ ಯೋಜನೆ ತಯಾರಾಗಿದ್ದು ಯಾವಾಗ?

ಆ) ಸದರಿ ಕೆಲಸ ಪ್ರಾರಂಭವಾಗಿದೆಯೇ? ಆಗಿದ್ದಲ್ಲಿ ಈವರೆವಿಗೂ ಎಷ್ಟು ಕೆಲಸ ಆಗಿದೆ, ಈ ಕೆಲಸ ಎಂದು ಮುಗಿಯಬೇಕು ಹಾಗೂ ಎಂದು ಮುಕ್ತಾಯವಾಗುವುದು?

ಇ) ಈ ಕೆಲಸಕ್ಕೆ ತಗಲುವ ವೆಚ್ಚದ ಮೂಲ ಅಂದಾಜು ಎಷ್ಟು? ಈಗಿನ ಅಂದಾಜು ವೆಚ್ಚ ಎಷ್ಟು?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಮೈಸೂರು ನಗರದ ಸಮಗ್ರ ನೀರು ಸರಬರಾಜು ಅಭಿವೃದ್ಧಿ ಹಾಗೂ ವಿತರಣಾ ವ್ಯವಸ್ಥೆಯ ನವೀಕರಣ ಕಾಮಗಾರಿಗಳ ಅಂದಾಜಿಗೆ ರೂ. 650.00 ಲಕ್ಷಗಳಿಗೆ ಸರ್ಕಾರದಿಂದ 30-3-1990 ರಲ್ಲಿ ಆಡಳಿತಾತ್ಮಕ ಮಂಜೂರಾತಿ ದೊರೆತಿದೆ. ಈ ಯೋಜನೆಯಲ್ಲಿ ನಾಚನಹಳ್ಳಿಯಿಂದ ಯಾದವಗಿರಿವರೆಗೆ 8.45 ಕಿ.ಮೀ. ಉದ್ದದ 400 ಮತ್ತು 500 ಮಿ. ಮೀ. ವ್ಯಾಸದ ಪಿ.ಎಸ್.ಸಿ. ಪೈಪ್ ಅಳವಡಿಸಲು ಅವಕಾಶ ಮಾಡಲಾಗಿದೆ.

ಆ) ಹೌದು, ಈ ಕೆಲಸವನ್ನು ವಹಿಸಿಕೊಂಡಿರುವ ಗುತ್ತಿಗೆದಾರರಾದ ಮೇ: ಅರುಣ್ ಇಂಜಿನಿಯರಿಂಗ್ ಕಂಪನಿಯವರು 500 ಮಿ. ಮೀ. ವ್ಯಾಸದ 930 ಮೀಟರ್ ಕೊಳವೆಗಳನ್ನು ಮತ್ತು 400 ಮಿ. ಮೀ. ವ್ಯಾಸದ 715 ಮೀಟರ್ ಕೊಳವೆಗಳನ್ನು ಸರಬರಾಜು ಮಾಡಿರುತ್ತಾರೆ. ಗುತ್ತಿಗೆ ಕರಾರಿನ ಪ್ರಕಾರ ಈ ಕೆಲಸವನ್ನು 10:95ಕ್ಕೆ ಪೂರೈಸಬೇಕಾಗಿತ್ತು.

ಇ) ಈ ಕೆಲಸದ ಅಂದಾಜು ಮೊತ್ತ ರೂ. 40.29 ಲಕ್ಷಗಳಾಗಿದ್ದು ಟೆಂಡರ್ ಪ್ರಕಾರ ಗೊತ್ತುಪಡಿಸಿರುವ ಹಣ ರೂ. 56.72 ಲಕ್ಷಗಳಾಗಿವೆ.

ಶ್ರೀ ಎ. ರಾಮದಾಸ್:- ಪ್ರಮುಖವಾಗಿ ಕೆಲಸ ಯಾವಾಗ ಪ್ರಾರಂಭವಾಯಿತು ಎನ್ನುವುದಕ್ಕೆ ಉತ್ತರ ಹೇಳಿದ್ದಾರೆ. ಕೆಲಸ ಪ್ರಾರಂಭವಾಗಿದೆಯೇ ಎಂದು ಕೇಳಿದ್ದಕ್ಕೆ ಹೌದು ಎಂದು ಹೇಳಿದ್ದಾರೆ. ಕೆಲಸ ಪ್ರಾರಂಭವಾಗಿದೆ ಎಂದರೆ ಏನು ಅರ್ಥ? ಆ ಪೈಪ್ ಲೈನ್ ಕೆಲಸ ಪ್ರಾರಂಭವಾಗಿಲ್ಲದೇ ಇರುವುದನ್ನು ಕೂಡ "ಹೌದು" ಎಂದು ಇದೆ. ಈ ಕೆಲಸಕ್ಕೆ ಯಾವಾಗ ವರ್ಕ್ ಆರ್ಡರ್ ಕೊಟ್ಟರು? ವರ್ಕ್ ಆರ್ಡರ್‌ನಲ್ಲಿ ಕೊಟ್ಟಂತಹ ಸಮಯ ಎಷ್ಟು? ಹಾಗೂ ಆ ವರ್ಕ್ ಆರ್ಡರ್ ಪ್ರಕಾರದಲ್ಲಿ ಇದ್ದ ರೀತಿಯಲ್ಲಿ 40.29 ಲಕ್ಷ ರೂ.ಗಳಿಗೆ ಕೊಟ್ಟಂತಹ ಹಣವೇನು ಇತ್ತು ಆ ಮೂಲ ಧನಕ್ಕೆ 16.34 ಲಕ್ಷ ರೂ. ಎಸ್ಕಲೇಷನ್ ಕೊಟ್ಟು 56.72 ಲಕ್ಷ ರೂ. ಕೊಟ್ಟಿದ್ದರೂ ಕೂಡ ಇನ್ನೂ ಕೆಲಸ ಪೂರ್ತಿಯಾಗದೇ ಇರುವುದಕ್ಕೆ ಕಾರಣವೇನು ಮತ್ತು ಈ ಕೆಲಸ ಯಾವಾಗ ಮುಗಿಯುತ್ತದೆಂಬ ಬಗ್ಗೆ ಎಲ್ಲೂ ಸೂಚನೆ ಕೊಟ್ಟಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ:- ಮೈಸೂರಿಗೆ ಸಮಗ್ರವಾಗಿ ನೀರು ಕೊಡುವ ಕಾರ್ಯ ಹಾಗೂ ವಿತರಣಾ ವ್ಯವಸ್ಥೆಗೆ ಸುಮಾರು 650 ಲಕ್ಷ ರೂಪಾಯಿಗೆ 1990ರಲ್ಲಿ ಮಂಜೂರಾತಿ ಕೊಟ್ಟಿದ್ದು ಯಾದವಗಿರಿಯಿಂದ ನಾಚನಹಳ್ಳಿಪಾಳ್ಯಕ್ಕೆ ಕೊಡುವಂತಹ ವ್ಯವಸ್ಥೆ ಇದರ ಮೂಲ ಬಂದು ಬೆಳಗೊಳದಿಂದ ಕನ್ನಂಬಾಡಿ ಯೋಜನೆಯಲ್ಲಿ ದೇವರಾಯ ಕಾಲುವೆ ಮೂಲಕ ನೀರನ್ನು ತೆಗೆದುಕೊಳ್ಳುವಂಥಾದ್ದು ಒಂದು 8 ಕಿಲೋ ಮೀಟರ್ ವ್ಯವಸ್ಥೆ ನಂತರ ಯಾದವಗಿರಿಯಿಂದ ಇನ್ನು 8.5 ಕಿಲೋ ಮೀಟರ್ ನೀರನ್ನು ನಾಚನಹಳ್ಳಿಗೆ ತೆಗೆದುಕೊಂಡು ಹೋಗುವಂತಹ ಎರಡು ಯೋಜನೆ ಇದೆ. ಇದರಲ್ಲಿ ಯಾದವಗಿರಿ ಯೋಜನೆ ಜಲಮಟ್ಟದ ಜಲ ಸಂಗ್ರಹದಿಂದ ತೆಗೆದುಕೊಂಡು ಹೋಗುವಂತಹ 8.45 ಕಿಲೋ ಮೀಟರ್ ಯೋಜನೆಗೆ 68 ಲಕ್ಷ ರೂಪಾಯಿಗಳ ಟೆಂಡರ್ ಅನ್ನು 92ರಲ್ಲಿ ಕರೆದಿರುವಂಥಾದ್ದು 1995ಕ್ಕೆ ಇದು ಮುಗಿಯಬೇಕಾಗಿತ್ತು. ಅರುಣ್ ಎಂಜಿನಿಯರಿಂಗ್ ಎಂದು ಆ

ಎಂಟರ್‌ಪ್ರೈಸಸ್‌ಗೆ ಕೊಟ್ಟಂತಹ ಟೆಂಡರಿನಲ್ಲಿ ಕೇವಲ 1.6 ಕಿಲೋ ಮೀಟರಿಗೆ ಮಾತ್ರ ಪಿ.ವಿ.ಸಿ. ಪೈಪ್ ಸರಬರಾಜು ಮಾಡಿದ್ದಾರೆ ಉಳಿದ ಕೆಲಸ ಮಾಡದೇ ನಮಗೆ ಇದರಲ್ಲಿ ನಷ್ಟವಾಗುತ್ತದೆಂದು ತಿಳಿಸಿದ್ದಾರೆ. ಆದರಲ್ಲಿ ಎಸ್ಕಲೇಷನ್ ಮಾಡಬೇಕು. ರಾಜ್ಯದಲ್ಲಿ 18 ಯೋಜನೆಗಳು ಇವೆ. ಮಾನ್ಯ ವಾಟಾಳ್‌ರವರು ಚಾಮರಾಜನಗರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿದರು. ಚಾಮರಾಜನಗರ, ಶಿವಮೊಗ್ಗ, ಬೇರೆ ಬೇರೆ ಕೇಂದ್ರಗಳ 18 ಯೋಜನೆಗಳಿಗೆ 6 ಕೋಟಿ ರೂಪಾಯಿ-ಯಷ್ಟು ಎಸ್ಕಲೇಷನ್ ಜಾಸ್ತಿಯಾಗಿದ್ದು ಆ ಹಣವನ್ನು ತುಂಬಿ ಕೊಡಬೇಕೆಂದು ಈಗಾಗಲೇ ಮುಖ್ಯ-ಮಂತ್ರಿಗಳು ಮತ್ತು ಹಣಕಾಸಿನ ಕಾರ್ಯದರ್ಶಿಗಳು ಒಪ್ಪಿಕೊಂಡು ಆ ಹಣವನ್ನು ಕೊಡುತ್ತಿದ್ದಾರೆ. 6 ಕೋಟಿ ಹಣವನ್ನು ಕೊಡುತ್ತಿದ್ದಾರೆ. 18 ಯೋಜನೆಗಳು ಏನು ನಿಂತಿವೆ ಇದಕ್ಕೆ ಹಣ ತುಂಬುವಂತಹ ಕೆಲಸ ನಡೆಯುತ್ತಿದೆ. ಮಾನ್ಯ ವಾಟಾಳ್‌ರವರ ಕ್ಷೇತ್ರವಾದ ಚಾಮರಾಜನಗರದಲ್ಲಿ ಇನ್ನು 40 ಲಕ್ಷ ರೂಪಾಯಿಗಳನ್ನು ಹೆಚ್ಚು ತುಂಬಬೇಕು. ಇನ್ನು ಕೆಲವು ಕಡೆ 80 ಲಕ್ಷ ಕೊಡಬೇಕು ಹೀಗೆ ಇದೆ. ಚಿಕ್ಕಣ್ಣಯ್ಯನವರ ಸಮಿತಿಯನ್ನು ಆಗ ನಮ್ಮ ಮುಖ್ಯಮಂತ್ರಿಗಳು ಡಿ.ಸಿ.ಎಂ. ಆಗಿದ್ದಾಗ ನೇಮಕ ಮಾಡಿದ್ದರು. ಆ ಸಮಿತಿಯವರು ಕೂಡ ಈ ಕಾರ್ಯ ತಡವಾಗಿರುವುದರಿಂದ ಈ ಎಸ್ಕಲೇಷನ್ ಕೊಡಬೇಕೆಂದು ಶಿಪಾರಸ್ಸು ಮಾಡಿದೆ. ಅದರಂತೆ ಅವರಿಗೆ ಕೊಡುತ್ತೇವೆ. ಅದರಂತೆ 13.17 ಲಕ್ಷ ರೂಪಾಯಿಗಳನ್ನೂ ಜಾಸ್ತಿ ಏನು ಕೇಳಿದ್ದಾರೆ, ಅದನ್ನು ಕೊಟ್ಟರೆ ನಾನು ಕೆಲಸ ಮಾಡುತ್ತೇನೆಂದು ಹೇಳಿದ್ದಾರೆ. ಆದರಂತೆ ನಾವು ಕೊಡುತ್ತೇವೆ. ಜೊತೆಗೆ 1997ರ ಮಾರ್ಚ್ ಒಳಗೆ ಆ ಕೆಲಸವನ್ನು ಪೂರೈಸುತ್ತೇವೆ.

ಶ್ರೀ ಎ. ರಾಮದಾಸ್:- ಮಾನ್ಯ ಸಚಿವರಿಗೆ ಒಂದೇ ಒಂದು ಪ್ರಶ್ನೆ. ಇಲ್ಲಿ ವರ್ಕ್ ಆರ್ಡರ್ ಅನ್ನು 1992ರಲ್ಲಿ ಕೊಟ್ಟು 15 ತಿಂಗಳೊಳಗೆ ಕೆಲಸ ಮುಗಿಸಬೇಕೆಂದು ಹೇಳಿದಿರಿ. ಅದರ ಪ್ರಕಾರದಲ್ಲಿ 40 ಲಕ್ಷ ರೂಪಾಯಿ ಇತ್ತು ಆದರೆ ವರ್ಕ್ ಆರ್ಡರ್ ಕೊಡುವಂತಹ ಸಂದರ್ಭದಲ್ಲಿ 16 ಲಕ್ಷ ಎಸ್ಕಲೇಷನ್ ಸೇರಿಸಿ ವರ್ಕ್ ಆರ್ಡರ್ ಕೊಟ್ಟಿರಿ. ಆದರೆ ಇವತ್ತಿನವರೆಗೂ ಆ ಹಣ ತೆಗೆದು-ಕೊಂಡಂತಹ ಇಂಜಿನಿಯರ್ ಎಲ್ಲಿದ್ದಾರೆಂದು ನಾವು ವರ್ಷಗಳ ಕಾಲದಿಂದಲೂ ಹುಡುಕುತ್ತಿದ್ದೇವೆ ಅವರು ಇವತ್ತಿನವರೆಗೂ ಸಿಕ್ಕಿಲ್ಲ. ಈ ಪ್ರಶ್ನೆಯನ್ನು ನಾನು ಮೂರನೆಯ ಬಾರಿ ಇಲ್ಲಿ ಕೇಳುತ್ತಿದ್ದೇನೆ. ಈ ಸಮಸ್ಯೆಗೆ ಮುಖ್ಯ ಕಾರಣ ಏನು? ಈ ಸಮಸ್ಯೆಯು ಸಮಸ್ಯೆಯಾಗಿಯೇ ಉಳಿದಿರುವುದಕ್ಕೆ ಕಾರಣವೇನು?

ಶ್ರೀ ಬಿ.ಎನ್. ಬಚ್ಚೇಗೌಡ:- ಹಣ ಕೊಟ್ಟಿರುವುದು 7 ಲಕ್ಷ 60 ಸಾವಿರ ಮಾತ್ರ. ಪೂರ್ತಿ ಕೊಟ್ಟಿಲ್ಲ. ಅವರೇನು ಪೈಪ್ ಸರಬರಾಜು ಮಾಡಿದ್ದಾರೆ ಅದಕ್ಕೆ ಮಾತ್ರ. ಅಲ್ಲಿ ಪೈಪು ಇದೆ. ತಾವು ಕೇಳುತ್ತೀರಿ ಎಂದು ತಿಳಿದೇ ನಾನು ಅಲ್ಲಿ ಪೈಪು ಇದೆಯೇ ಎಂದು ಅಧಿಕಾರಿಗಳ ಹತ್ತಿರ ಕೇಳಿದ್ದೆ. ಅಲ್ಲಿ ಪೈಪು ಇದೆ, ಇಲ್ಲದಿದ್ದರೆ ತಾವು ಇಲ್ಲ ಎಂದು ಹೇಳುತ್ತಿದ್ದಿರಿ. 7.60 ಲಕ್ಷ ಕೊಟ್ಟಿದೆ. ಎಸ್ಕಲೇಷನ್ ಚಾರ್ಜಸ್ ಕೊಟ್ಟರೆ ಮಾಡುತ್ತೇವೆಂದು ಅವರು ಒಪ್ಪಿಕೊಂಡಿದ್ದಾರೆ, ಅದರ ಪ್ರಕಾರ ಆದಷ್ಟು ಬೇಗ ಮಾಡಿಕೊಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ:- 6 ಕೋಟಿಯಷ್ಟು ಹೆಚ್ಚು ಹಣ ಬಿಡುಗಡೆ ಮಾಡುತ್ತೇವೆಂದು ಹೇಳುತ್ತಿದ್ದೀರಿ, ಸರಕಾರ ಇದಕ್ಕೆ ಒಪ್ಪಿದೆ ಎಂದು ಹೇಳುತ್ತಿದ್ದೀರಿ. ಇದರಿಂದ ನಗರಸಭೆ, ಪುರಸಭೆ ಪಾಲೇನು ಇದೆ ಆ ಪಾಲನ್ನು ಅದಕ್ಕೇನಾದರೂ ವಿನಾಯಿತಿ ಕೊಟ್ಟು ಪೂರ್ಣ ಹಣವನ್ನು ರಾಜ್ಯ ಸರಕಾರದಿಂದ ಭರಿಸುವಂತಹ ಕೆಲಸ ಮಾಡುತ್ತೀರೋ?

ಶ್ರೀ ಬಿ.ಎನ್. ಬಚ್ಚೇಗೌಡ:- ಆ ಬಗ್ಗೆ ನಗರ ಸಭೆ ಪುರಸಭೆಗಳಿಗೆ ಸಮಗ್ರವಾಗಿ ಈ ರಾಜ್ಯದಲ್ಲಿ ಏಕ ರೂಪ ನೀರಿನ ದರವನ್ನು ಕೊಡಬೇಕು ಈಗಿರುವ ಜನಸಂಖ್ಯೆಯ ಆಧಾರದ ಮೇಲೆ ಮಹಾರಾಷ್ಟ್ರವನ್ನು ಅನುಸರಿಸಿ 50 ಸಾವಿರದವರೆಗೆ ಉಚಿತವಾಗಿ ಕೊಡುವ ವ್ಯವಸ್ಥೆ 50 ಸಾವಿರದಿಂದ ಲಕ್ಷಕ್ಕೆ ಇದ್ದರೆ ಹತ್ತು ಭಾಗ ಕೊಡುವಂಥಾದ್ದು ಅದಕ್ಕೆ ಹೆಚ್ಚು ಇದ್ದರೆ ಬೇರೆ ಬೇರೆ ಕೊಡುವಂಥಾದ್ದು ಸಚಿವ ಸಂಪುಟದ ಮುಂದಿದೆ. ಇದಕ್ಕೆ ಅದು ಅಪ್ಲೈ ಆಗುವುದಿಲ್ಲ. ಎಸ್ಕಲೇಷನ್ ವರದಿ ಪ್ರಕಾರ ಅದನ್ನು ಕೊಡುವಂಥಾದ್ದು. ಶಿವಮೊಗ್ಗ, ಚಾಮರಾಜನಗರ ಇನ್ನು 18 ಈ ರೀತಿಯಾದಂಥಾದ್ದು ಏನು ಇವೆ ಅದೇ ಬೇರೆ ಪ್ರಶ್ನೆ.

3) ತಡೆಹಿಡಿಯಲಾದ ಪ್ರಶ್ನೆಗಳು.

ವಿಷಯ:- ಮೈಸೂರು ನಗರಪಾಲಿಕೆ ವತಿಯಿಂದ ಕಾಂಪ್ಲೆಕ್ಸ್ ನಿರ್ಮಾಣ.

214 (1141) ಶ್ರೀ ಎ. ರಾಮದಾಸ್ (ಕೃಷ್ಣರಾಜ):- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರ ಪಾಲಿಕೆ ವತಿಯಿಂದ ನಿರ್ಮಾಣ ಮಾಡಲು ಉದ್ದೇಶಿಸಿರುವ ಮಯೂರ ಕಾಂಪ್ಲೆಕ್ಸ್ ಎಂದು ಪ್ರಾರಂಭವಾಯಿತು? ಎಷ್ಟು ಖರ್ಚಾಗಿದೆ? ಇದರ ಅಂದಾಜು ವೆಚ್ಚವೆಷ್ಟು?

ಆ) ಈಗ ಈ ಕಾಮಗಾರಿಯು ಯಾವ ಹಂತದಲ್ಲಿದೆ, ಈ ಕಾಮಗಾರಿಯನ್ನು ಯಾವ ಕಂಟ್ರಾಕ್ಟರಿಗೆ ನೀಡಲಾಗಿತ್ತು? ಈ ಯೋಜನೆಗೆ ಸಾಲ ಪಡೆಯಲಾಗಿತ್ತೆ? ಎಷ್ಟು ಸಾಲ ಪಡೆಯಲಾಗಿದೆ? ಎಷ್ಟು ವಾರ್ಷಿಕ ಬಡ್ಡಿ ನೀಡಲಾಗುತ್ತಿದೆ?

ಶ್ರೀ ಮೀರಾಜುದ್ದೀನ್ ಎನ್. ಪಾಟೀಲ್ (ಪೌರಾಡಳಿತ ರಾಜ್ಯ ಸಚಿವರು):-

ಅ) ದಿನಾಂಕ 28-5-1988 ರಂದು ಪ್ರಾರಂಭವಾಗಿದ್ದು 25 ಲಕ್ಷ ರೂ. ಗಳು ಖರ್ಚಾಗಿದೆ. ಇದರ ಅಂದಾಜು ವೆಚ್ಚ ರೂ. 275 ಲಕ್ಷಗಳು.

ಆ) ಅಡಿಪಾಯ ಪೂರ್ಣಗೊಂಡಿದ್ದು, ಪಿಲ್ಲರ್‌ಗಳು ಅರ್ಧ ಮಟ್ಟಕ್ಕೆ ಬಂದಿವೆ. ಖೋಡೇಸ್ ಇಂಜಿನಿಯರಿಂಗ್ ಕಂಪನಿರವರಿಗೆ ಗುತ್ತಿಗೆ ನೀಡಲಾಗಿತ್ತು. ರೂ. 39.23 ಲಕ್ಷ ಸಾಲ ಪಡೆಯಲಾಗಿದ್ದು, ಸಾಲವನ್ನು ಸಂಪೂರ್ಣವಾಗಿ ಹುಡ್ಕೋಗೆ ಮರುಪಾವತಿ ಮಾಡಲಾಗಿದೆ. ಅದಕ್ಕೆ ಒಟ್ಟು ರೂ. 5.71 ಲಕ್ಷ ಬಡ್ಡಿ ಕೊಡಲಾಗಿದೆ.